ಇರತಕ್ಕಂತ ಹುದ್ದೆಗಳನ್ನಾದರೂ ಭರ್ತಿ ಮಾಡಿಸಿ ಎಂದು ಚಳುವಳಿ ಮಾಡುತ್ತಾರೆ. ಸರ್ಕಾರದ ಕಡೆಯಿಂದ ನೀವು ಎರಡನ್ನೂ ಮಾಡಲಿಲ್ಲವೆಂತಾದರೆ ಆ ಕಾಲೇಜಿನಲ್ಲಿ ಕಲಿಯುತ್ತಿರತಕ್ಕಂಥ ವಿದ್ಯಾರ್ಥಿಗಳು ಏನಾಗಬೇಕು? ಎಂದು ಕೇಳಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಈಗ ಕೆಲವು ಕಾಲೇಜುಗಳಲ್ಲಿ ವರ್ಕ್‌ಲೋಡ್ ಇಲ್ಲವೆಂಬ ಕಾರಣಕ್ಕಾಗಿ ನೇಮಕ ಮಾಡಿಲ್ಲ. ನೀವು ಖಾಸಗಿ ಕಾಲೇಜುಗಳ ಬಗ್ಗೆ ಕೇಳುತ್ತಿದ್ದೀರಿ. ಖಾಸಗಿ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡುವುದಕ್ಕೆ ಸರ್ಕಾರ ಇವತ್ತಿನ ದಿವಸ ಅನುಮತಿ ಕೊಟ್ಟಿಲ್ಲ. ಈಗ ಸರ್ಕಾರಿ ಕಾಲೇಜಿನಲ್ಲಿ ಸಹ ಇವತ್ತಿನ ದಿವಸ ಎಲ್ಲಿ ವರ್ಕ್‌ಲೋಡ್ ಇದೆ, ಎಲ್ಲಿ ವರ್ಕ್‌ಲೋಡ್ ಇಲ್ಲ ಎಂದು ನೋಡಿ, ವರ್ಕ್‌ಲೋಡ್ ಇರುವ ಕಡೆ ಮಾತ್ರ ಖಾಲಿ ಹುದ್ದೆಗಳನ್ನು ತುಂಬುತ್ತಿದ್ದೇವೆ. ವರ್ಕ್‌ಲೋಡ್ ಇಲ್ಲದ ಕಡೆ ತುಂಬುತ್ತಿಲ್ಲ. ಈಗ ಸದ್ಯಕ್ಕೆ ಹುಡುಗರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಖಾಲಿ ಹುದ್ದೆ ತುಂಬಬೇಕೆಂದು ಹೇಳುತ್ತಿರುವುದನ್ನು ನಾನು ಒಪ್ಪುತ್ತೇನೆ. ಆದರೆ ಎಲ್ಲಾ ಕಡೆಯು ಇವತ್ತಿನ ದಿವಸ ಖಾಸಗಿ ಕಾಲೇಜಿಗಳಿಗಂತೂ ನಾವು ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಿ ಎಂದು ಪರವಾನಿಗೆ ಕೊಟ್ಟಿಲ್ಲ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ಮಾನ್ಯ ರವಿಯವರೇ, ದಯಮಾಡಿ ಕುಳಿತುಕೊಳ್ಳಿ. ಮೂರು ಉಪ ಪ್ರಶ್ನೆಯನ್ನು ಕೇಳಿದ್ದೀರಿ. ಘನಃ ಈ ತರಹ ಎದ್ದುನಿಂತುಕೊಂಡರೆ ಸದನ ನಡೆಸುವುದಕ್ಕೆ ಆಗುವುದಿಲ್ಲ. ದಯಮಾಡಿ ಕುಳಿತುಕೊಳ್ಳಬೇಕು. ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

ತೆಂಗಿನ ಮರದ ಕೀಟ ಭಾದೆಯನ್ನು ನಿಯಂತ್ರಣಗೊಳಿಸುವುದು

18 (285) : ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೆಂಗಿನ ಮರದ ಕೀಟದ ಬಾಧೆ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ನುಸಿ ಖಾಯಿಲೆಯಿಂದ ನಾಶವಾಗಿರುವ ಮರಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು);

ಇ) ನಾಶವಾಗಿರುವ ತೆಂಗಿನ ಮರಗಳಿಗೆ ಪರಿಹಾರ ಧನವನ್ನು ನೀಡಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) ತೆಂಗಿನ ಮರದ ಕೀಟದ ಬಾಧೆ ತಪ್ಪಿಸಲು ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣೆಗಾಗಿ ಪರೋಪಜೀವಿಗಳ ಉತ್ಪಾದನೆ ಮತ್ತು ವಿತರಣೇ, ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಒದಗಿಸುವುದು, ತೆಂಗಿನ ನುಸಿ ನಿಯಂತ್ರಣೆಗಾಗಿ ರಾಜ್ಯದ ಪ್ರಮುಖ ತೆಂಗು ಬೆಳೆಯುವ ಜಿಲ್ಲೆಗಳಲ್ಲಿ 100 ಬ್ಲಾಕ್ ಪ್ರಾತ್ಯಕ್ಷತೆ ಹಾಗೂ ರೈತರಲ್ಲಿ ಅರಿವು ಮೂಡಿಸಲು 650 ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ಈ ಸಾಲಿನಲ್ಲಿಯೂ ಇದನ್ನು ಜಾರಿಗೊಳಿಸಲಾಗುತ್ತಿದೆ. ಅಲ್ಲದೆ, ಪ್ರಚಾರ ಸಾಮಗ್ರಿಗಳ ಮೂಲಕ ರೈತರಿಗೆ ಅರಿವು ನೀಡಲಾಗುತ್ತಿದೆ.

ಆ) ನುಸಿ ಬಾಧೆಯಿಂದ ತೆಂಗಿನ ಮರಗಳು ನಾಶವಾಗಿರುವುದಿಲ್ಲ. ಆದುದರಿಂದ ಜಿಲ್ಲಾವಾರು ಮಾಹಿತಿ ಒದಗಿಸಲು ಸಾಧ್ಯವಾಗುವುದಿಲ್ಲ. ಆದರೆ, ಇದರ ಬಾಧೆಯಿಂದ ತೆಂಗಿನ ಕಾಯಿಗಳ ಬೆಳವಣಿಗೆ ಕುಂಠಿತಗೊಂಡು ಆಕಾರ ವಿರೂಪಗೊಳ್ಳುತ್ತದೆ. ಎಳೆ ಕಾಯಿಗಳು ನುಸಿ ಬಾಧೆಯಿಂದ ಉದುರಿ ಹೋಗುತ್ತವೆ. ಆದ್ದರಿಂದ, ಇಳುವರಿಯು ಗಣನೀಯವಾಗಿ ಕಡಿಮೆಯಾಗಿರುತ್ತದೆ.

ಇ) ಸರ್ಕಾರದಿಂದ ಯಾವುದೇ ಪರಿಹಾರ ಧನವನ್ನು ನೀಡುತ್ತಿರುವುದಿಲ್ಲ. ಆದರೆ, ನುಸಿಯು ಗಾಳಿ ಮೂಲಕ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಶೀಘ್ರವಾಗಿ ಹರಡುವುದರಿಂದ ಸಂಪೂರ್ಣ ಹತೋಟಿಯು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಇದರ ಬಾಧೆಯಿಂದ ಉಂಟಾಗುವ ಆರ್ಥಿಕ ನಷ್ಟವನ್ನು ನಿಯಂತ್ರಿಸಲು ಹಾಗೂ ತೆಂಗಿನ ಮರಗಳಿಗೆ ಅವಶ್ಯ ಪೋಷಕಾಂಶಗಳನ್ನು ಒಗಿಸುವುದರ ಮೂಲಕ ಮರಗಳಲ್ಲಿ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ರಾಜ್ಯದ ತೆಂಗು ಬೆಳೆಯುವ ಪ್ರಮುಖ 22 ಜಿಲ್ಲೆಗಳಲ್ಲಿ 100 ಬ್ಲಾಕ್ ಪ್ರಾತ್ಯಕ್ಷತೆಗಳನ್ನು ರೈತರ ತೋಟಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಅಲ್ಲದೆ, ಸಸ್ಯಾಧಾರಿತ ಕೀಟನಾಶಕಗಳನ್ನು ಸಹ ಒದಗಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತೆಂಗಿನ ಮರಗಳು ಎಲ್ಲೂ ನಾಶ ಆಗಲೇ ಇಲ್ಲ ಎನ್ನುವ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ನಮ್ಮ ಚಾಮರಾಜನಗರ ತಾಲ್ಲೂಕು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿಯೇ ನುಸಿ ಪೀಡೆಯಿಂದ ಸುಮಾರು ಸಾವಿರಾರು ಮರಗಳು ನಾಶದಲ್ಲಿದೆ. ಮಾನ್ಯ ಮಂತ್ರಿಗಳು ಆ ಸ್ಥಳಕ್ಕೆ ಹೋಗಿ ಪರಿಸೀಲಿಸಿದ್ದೀರಾ ಅಥವಾ ನಿಮ್ಮ ಅಧಿಕಾರಿಗಳು ಕೊಟ್ಟಂಥ ವರದಿಯನ್ನು ಕೊಡುತ್ತಿದ್ದೀರಾ? ಬೇಕಾದರೆ ನುಸಿ ಪೀಡೆಯಿಂದ ಸತ್ತಿರುವ ತೆಂಗಿನ ಮರಗಳನ್ನು ನಾನು ನಿಮಗೆ ತೋರಿಸಿಕೊಡುತ್ತೇನೆ ನೀವು ನಾಳೆ ಬೆಳಿಗ್ಗೆ ನನ್ನ ಜೊತೆ ಬರುವುದಕ್ಕೆ ತಯಾರಾಗಿದ್ದೀರಾ? ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಹೇಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ನನಗೂ ಕೂಡ 2000 ತೆಂಗಿನ ಮರ ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ತೆಂಗಿನ ಮರ ಇದೆಯೋ ಇಲ್ಲವೋ ಗೊತ್ತಿಲ್ಲ. ಜೂನ್ 5ನೇ ತಾರೀಖು ನಾನು ಇಲ್ಲಿ oath ತೆಗೆದುಕೊಂಡು 6ನೇ ತಾರೀಖಿಗೆ ಹೋಗುವಷ್ಟರೊಳಗಾಗಿ ನಮ್ಮ ತೋಟದಲ್ಲಿ 400 ತೆಂಗಿನ ಮರಗಳನ್ನು ನಾವು ತೆಗೆದಿದ್ದೇವೆ. ಮರ ಅಷ್ಟು ನಾಶ ಆಗಿಲ್ಲ. ಮರ ನಾಶ ಆಗುವುದು ಹೇಗೆಂದರೆ, ಮರ ಏನಾದರೂ ಒಣಗಿ ಹೋದರೆ ಅದು ನಾಶವಾಗುತ್ತದೆ. ನುಸಿಯಿಂದ ಮರ ನಾಶ ಆಗುವುದಿಲ್ಲ. ಕಾಯಿ ಮಾತ್ರ ಸಣ್ಣದಾಗುತ್ತದೆ. ನಾಶ ಆಗಿಲ್ಲ ಎಂದು ಯಾವ ರೀತಿ ಹೇಳಿದ್ದೇನೆಂದರೆ ಮರ ಚೆನ್ನಾಗಿದೆ ಆದರೆ ಕಾಯಿ ಮಾತ್ರ ನಾಶ ಆಗಿದೆ. ಅದನ್ನು ಬಿಟ್ಟು ನೀವು ಮರಗಳು ನಾಶ ಆಗಿದೆ ಎಂದು ಹೇಳುವುದು ಸತ್ಯಕ್ಕೆ ದೂರವಾದಂಥ ವಿಷಯ.

ಶ್ರೀ ವಾಟಾಳ್ ನಾಗರಾಜ್ : ನನಗೂ ತೆಂಗಿನ ತೋಟವಿದ್ದು 2500 ಮರಗಳು ಇವೆ. ಇವರೇನೋ ನನಗಿಲ್ಲ ಎಂದು ತಿಳಿದುಕೊಂಡಿರುವ ಹಾಗಿದೆ. ನನಗೆ ತೋಟ ಇದೆ. ಆದರೆ ನಾನು ಮಾನ್ಯ ಸಚಿವರನ್ನು ಕೇಳುವುದೇನೆಂದರೆ, ಬೋಳಾಗಿರತಕ್ಕಂಥ ಮರಗಳನ್ನು ನಾಳೆ ಬೆಳಿಗ್ಗೆ ನಾನು ತೋರಿಸುತ್ತೇನೆ. ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರಾ ಕೇಳಿ.

ಶ್ರೀ ಕೆ. ಶ್ರೀನಿವಾಸಗೌಡ : ಈ ಕಾಯಿಲೆಯಿಂದ ಮರ ಬೋಳಾಗುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾನು ಬೆಳೆಸಿದ ಮರಗಳಲ್ಲಿಯೇ ನೋಡಿದ್ದೇನೆ. ಪುನಃ ಪುನಃ ಬೇಕಾದರೆ ತಮಗೆ ಹೇಳುತ್ತೇನೆ.

ನಾನು ಒಬ್ಬ ರೈತ. ಎಲ್ಲಿ ಮರ ಹಾಳಾಗುತ್ತದೆಂದರೆ ಹುಳ ಬಿದ್ದಿದ್ದರೆ ಹುಳದಿಂದ ಆಗುತ್ತದೆಯೇ ವಿನಃ ನುಸಿಯಿಂದ ಮರ ಸಾಯುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಕಾಯಿ ನಾಶ ಆಗುತ್ತದೆ. ತೆಂಗಿನ ಎಲೆಗೆ ಕಪ್ಪು ಹುಳು ಬೀಳುತ್ತದೆ. ಅದರಿಂದ ಆ ಮರ ನಾಶವಾಗುತ್ತದೆಯೇ ವಿನಃ ಈ ನುಸಿಯಿಂದ ಹಾಳಾಗುವುದಕ್ಕೆ ಸಾಧ್ಯವೇ ಇಲ್ಲ. ಮರ ಚೆನ್ನಾಗಿಯೇ ಇರುತ್ತದೆ ಕಾಯಿ ಮಾತ್ರ ಸಣ್ಣದಾಗಿರುತ್ತದೆ.

ಶ್ರೀ ಜೆ.ಸಿ. ಮಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಯವರು ಹೇಳಿದ ಹಾಗೆ ನುಸಿಯಿಂದ ಮರ ನಾಶ ಆಗಲಿಲ್ಲ. ತಾವೇನು ಟ್ರೀಟ್‌ಮೆಂಟ್ ಕೊಡಬೇಕಾದರೆ ಸ್ಟೆಮ್‌ಬೋರ್ ಮಾಡಿದಿರಿ ತಾವೇನು ಕೆಮಿಕಲ್ ಕಟ್ಟಿದಿರಿ, ಸಹಸ್ರಾರು ಮರಗಳನ್ನು ಕರ್ನಾಟಕದಲ್ಲಿ ನೀಗಿದ್ದೀರಿ. ತಾವು ತೆಂಗಿನ ಮರ ಇಟ್ಟುಕೊಂಡು ಇಂಥ ಉತ್ತರ ಹೇಳಿದರೆ ನಾವು ತೆಂಗಿನ ಮರ ಇಟ್ಟುಕೊಂಡು ಸತ್ತುಹೋಗಬೇಕಾಗುತ್ತದೆ. ನೀವೇನು ಕೆಮಿಕಲ್ ಅನ್ನು ತೆಂಗಿನ ಮರಕ್ಕೆ ಕೊಟ್ಟಿರಿ, ಅದಕ್ಕಿಂತ ಹೆಚ್ಚು ಮರ ನಾಶವಾಗಿ ಹೋಗಿದೆ ಎಂದು ಅಸೆಂಬ್ಲಿಗೆ ಬಂದು ತಾವು ಹೇಳುತ್ತೀರಾ? ಎರಡನೆಯದು, ಪ್ರಾತ್ಯಕ್ಷಿಕೆ ತೆಗೆದುಕೊಂಡಿದ್ದೇವೆ ಎಂದು ನೀವು ಏನು coconut development board ನವರು ಮಾಡಿರುವ ಕಾರ್ಯಕ್ರಮವನ್ನು ಇಲ್ಲಿ ಕೊಚ್ಚಿಕೊಂಡಿದ್ದೀರಿ, ಎಲ್ಲಾದರೂ ಆಗಿದೆ ಎಂದು ಹೇಳುತ್ತೀರಾ? ಒಂದೊಂದು ತಾಲ್ಲೂಕಿಗೆ 6000 ಗಿಡ ಎಂದು ಪಟ್ಟಿ ಮಾಡಿದ್ದೀರಿ, ಯಾವುದೋ ಒಂದು ಕಡೆ ಮರಕ್ಕೆ ನಂಬರ್ ಹಾಕಿಕೊಂಡು ಬಂದು ಗೊಬ್ಬರವನ್ನು, ಹಿಂಡಿಯನ್ನು, ನುಸಿ ಪೀಡೆಗೆ ಕೊಟ್ಟ ಔಷಧಿಯನ್ನು ತಿಂದುಹಾಕಿದ್ದೀರಿ. ಯಾವುದೇ ತಾಲ್ಲೂಕಿನಲ್ಲಿ ಈ ಕಾರ್ಯಕ್ರಮ ನಡೆದಿಲ್ಲ. ತೆಂಗಿನ ಮರ ನಾಶವಾಗಿಲ್ಲ ಎನ್ನುವ ಮಾತನ್ನು ತಾವು ಏನು ಹೇಳಿದ್ದೀರಿ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇವರು ಅಂದರೆ ಹಿಂದಿನ ಸರ್ಕಾರದವರು ಟ್ರೀಟ್‌ಮೆಂಟ್ ಕೊಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಮರ ನಾಶವಾಗಿದೆ. ಚಾಮರಾಜನಗರ ಏರಿಯಾದಲ್ಲಿ ಸ್ಪಷ್ಟವಾಗಿ ಕೆಂಪು ಬಣ್ಣಕ್ಕೆ ತಿರುಗಿ ನಾಶವಾಗಿದೆ. ಅದಕ್ಕೆ ತಾವೇ ಹೊಣೆಗಾರರು ರೈತರಲ್ಲ. ಅದಕ್ಕೆ ತಾವೇನು ಹೇಳುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕೃಷಿ ಸಚಿವರು ಯುವಕರಿದ್ದೀರಿ. ಅನುಭವವಿದೆ, ಬಹಳ ಒಳ್ಳೆಯ ಉತ್ತರವನ್ನು ನಿರೀಕ್ಷೆ ಮಾಡಿದ್ದೆ. ಅಧಿಕಾರಿಗಳು ಏನು ಬರೆದು ಕೊಟ್ಟರೋ ಗೊತ್ತಿಲ್ಲ. ಆದರೆ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನಾನು ನಿಮ್ಮ ಜೊತೆ ಬರುವುದಿಲ್ಲ, ಇವತ್ತು ನೀವೇ ಅರಸಿ ಕೆರೆಯಿಂದ ತುಮಕೂರು ವರೆಗೆ ಬನ್ನಿ. ಬರುವಾಗ ಎಡಬಲದಲ್ಲಿರುವ ತೆಂಗಿನ ತೋಟವನ್ನು ನೋಡಿ. 100ಕ್ಕೆ 70 ಭಾಗ ಈ ನುಸಿ ಪೀಡೆಯಿಂದ ಸಂಪೂರ್ಣ ನಾಶವಾಗಿದೆ ಕೆಲವು ಕಡೆ ತೆಂಗಿನ ಮರವನ್ನು ಕಡಿದಿದ್ದಾರೆ. ನೀವೇನು ಹೇಳುವುದಕ್ಕೆ ಹೊರಟಿದ್ದೀರಿ, ಕಾಯಿ ಕಪ್ಪಾಗುತ್ತದೆ, ಕಾಯಿ ಒಣಗುತ್ತದೆ ಗಿಡ ಬೀಳುವುದಿಲ್ಲ ಎಂದು ಹೇಳಿದಿರಿ. ಕಾಯಿಯೇ ಇಲ್ಲದಿದ್ದರೆ ಫಲವೇ ಬರದಿದ್ದರೆ ಆ ಮರವನ್ನು ತೆಗೆದುಕೊಂಡು ಬೆಂಕಿ ಹಚ್ಚಿಕೊಳ್ಳುತ್ತಾರೆಯೇ? ಅದಕ್ಕೆ ಇಲ್ಲಿ ವಾಟಾಳ್ ನಾಗರಾಜ್‌ರವರು ಅಥವಾ ಇಡೀ ತೆಂಗಿನ ಬೆಳೆಗಾರರ ಪ್ರಶ್ನೆ ಏನೆಂದರೆ ಈ ನುಸಿಯಿಂದ ತೆಂಗಿನ ಮರಗಳ ಸರ್ವನಾಶವಾಗಿದೆ. ಅದಕ್ಕೆ ಏನಾದರೂ ಪರಿಹಾರ ಕೊಡುತ್ತೀರಾ? ಇರುವ ತೆಂಗಿನ ಗಿಡವನ್ನು ಉಳಿಸುವುದಕ್ಕೆ ತಾವೇನಾದರೂ ಔಷಧೋಪಚಾರ, ಕೀಟನಾಶಕ ಕೊಡುವುದಕ್ಕೆ ದುಡ್ಡು ಇದೆಯೇ? ಅವರಿಗೆ ಬೇಕಾದಂಥ ಔಷಧಿಗಳಿಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಯಾರನ್ನು ನಾವು approach ಮಾಡಬೇಕು ಇದರ ಬಗ್ಗೆ

ತಾವು ಹೇಳಿದರೆ ತೆಂಗಿನ ಮರವನ್ನು ಉಳಿಸಬಹುದು ಕಲ್ಪವೃಕ್ಷವನ್ನು ಉಳಿಸಬಹುದು. ಇಲ್ಲದಿದ್ದರೆ ಸರ್ವನಾಶವಾಗುತ್ತದೆ. ಆದ್ದರಿಂದ ತಾವು ಇದಕ್ಕೆ ಸೀರಿಯಸ್ ಆಗಿ ಉತ್ತರ ಕೊಟ್ಟರೆ ತೆಂಗು ಬೆಳೆಗಾರರಿಗೆ ಈ ನುಸಿಯಿಂದ ತೆಂಗು ಸಂಪೂರ್ಣವಾಗಿ ನಾಶ ಆಗಿರುವವರಿಗೆ ಈ ಸರ್ಕಾರ ನಮ್ಮ ರಕ್ಷಣೆಗೆ ಬರುತ್ತದೆಂದು ಸಮಾಧಾನ ಆಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೆ, ಕಡೂರು ತಾಲ್ಲೂಕಿನಲ್ಲಿ ನುಸಿರೋಗದ ಜೊತೆಗೆ ರೆಡ್ ಹೆಡೆಡ್ ಕ್ಯಾಟರ್ ಪಿಲ್ಲರ್ ರೋಗ ಬಂದಿದೆ. ಅದು ಮಾನ್ಯ ಕೃಷಿ ಸಚಿವರಿಗೆ ಗೊತ್ತಿದೆಯೋ ಇಲ್ಲವೋ. ನುಸಿ ರೋಗ ಬರುವುದರಿಂದ ಮರ ಹಾಳಾಗುವುದಿಲ್ಲ. ಆದರೆ ಡ್ರಾಪ್‌ಔಟ್ ಆಗುತ್ತದೆ. ನುಸಿರೋಗ ಬಂದರೆ ಡ್ರಾಪ್‌ಔಟ್ ಆಗುತ್ತದೆ ಅಂದರೆ ಕಾಯಿಗಳ ಸಂಖ್ಯೆ ಕಡಿಮೆ ಆಗುತ್ತದೆ. ರೆಡ್ ಕ್ಯಾಟರ್‌ಪಿಲ್ಲರ್ ಬಂದು ಹೆಚ್ಚುಕಡಿಮೆ ಕಡೂರು ತಾಲ್ಲೂಕಿನಲ್ಲಿ ಸುಮಾರು ಎರಡೂವರೆ ಲಕ್ಷದಿಂದ ಮೂರು ಲಕ್ಷ ಮರಗಳು ಹಾಳಾಗಿ ಹೋಗಿದೆ. ಅಂದರೆ ಸುಳಿ ಹೋಗಿದೆ ಮತ್ತು ಮರ ಸಹ ಹೋಗಿದೆ. ಎಷ್ಟು ಮರಗಳು ಹೋಗಿದೆ ಎನ್ನುವುದರ ಫೋಟೋವನ್ನು ಮಾನ್ಯ ಕೃಷಿ ಸಚಿವರಿಗೆ ಬೇಕಾದರೆ ಒಪ್ಪಿಸುತ್ತೇನೆ. ಹಿಂದೆ ಒಂದು ಸಲ ಹಿಂದಿನ ಕೃಷಿ ಸಚಿವರಾದ ಶ್ರೀ ಅಲ್ಲಂವೀರಭದ್ರಪ್ಪನವರು ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಇದೇ ಸಭೆಯಲ್ಲಿ ಪ್ರಸ್ತಾಪ ಮಾಡಿ ಹೇಳಿದರು. ಆ ಒಂದು ಕೋಟಿ ರೂಪಾಯಿಯನ್ನು ಕೊಟ್ಟರೆ ಅದು ಉಪಯೋಗವಾಗಲಿಲ್ಲ. ಆದ್ದರಿಮದ ಕೇರಳದಲ್ಲಿ ಮೋನೋಕ್ರೊಟೋಫಾಸ್ ಎನ್ನುವ ಒಂದು ಪೆಸ್ಟಿಸೈಡ್ ಅನ್ನು ಸಿಂಪಡಿಸಬಹುದೆಂದು ಹೇಳಿದ್ದು. ಅದು ಮನುಷ್ಯನ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಒಂದು ವಿಚಾರ ಇರುವುದರಿಂದ ದಯವಿಟ್ಟು ಅದಕ್ಕೆ ಕೃಷಿ ಸಚಿವರು ಆ ತೋಟಗಾರಿಗೆ ತಜ್ಞರನ್ನು ವಿಚಾರ ಮಾಡಿ ಏನಾದರೊಂದು ಮಾಡಿದರೆ ಒಳ್ಳೆಯದು. ಅದು ಕೆಲವೊಂದು ಚಾಮರಾಜನಗರ ತಾಲ್ಲೂಕಿನಲ್ಲಿದೆ, ಕಡೂರು ತಾಲ್ಲೂಕಿನಲ್ಲಿದೆ, ಹೊಸದುರ್ಗ ತಾಲ್ಲೂಕಿನಲ್ಲಿದೆ, ಅರಸೀಕೆರೆ ತಾಲ್ಲೂಕಿನಲ್ಲಿದೆ. ದಯವಿಟ್ಟು, ಮಾನ್ಯ ಕೃಷಿ ಸಚಿವರು ಇದರ ಬಗ್ಗೆ ಗಮನಹರಿಸಬೇಕೆಂದು ನಾನು ತಮ್ಮ ಮೂಲಕ ಅವರ ಗಮನ ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ವಿವರಣೆ ಕೊಡುತ್ತಾ ಇದ್ದರೆ ಹೇಗೆ? ಪ್ರಶ್ನೆಗಳನ್ನು ಕೇಳುವುದಿದ್ದರೆ ಕೇಳಿ. ಇದು ಬಹಳ ಪ್ರಮುಖವಾದ ಪ್ರಶ್ನೆ. ಆ ಕಾರಣದಿಂದ ನಾನು ಅಲೋ ಮಾಡಿದ್ದೇನೆ.

ಶ್ರೀ ಎ.ಎಸ್. ಬಸವರಾಜು : ಅರಸೀಕೆರೆ ಕ್ಷೇತ್ರದಲ್ಲಿ ಸುಮಾರು 3 ಲಕ್ಷ ಮರಗಳು ನಾಶವಾಗಿವೆ. ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ನಾನು ಅವರನ್ನು ಕರೆದಿದ್ದೇನೆ. ತಮಗೆ ನಂತರ ಅವಕಾಶ ಕೊಡುತ್ತೇನೆ.

ಶ್ರೀ ಎ.ಎಸ್. ಬಸವರಾಜು : ಈಗಲಾದರೂ ಕೂಡ ಕೃಷಿ ಸಚಿವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ? ಯಾವ ಔಷಧಿ ಕೊಡುತ್ತಾರೆಂದು ಹೇಳಲಿ ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಅವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾನು ಉಪ ಪ್ರಶ್ನೆ ಕೇಳುತ್ತಿದ್ದೇನೆ. ಇದು ಬಹಳ ಪ್ರಮುಖವಾದ ವಿಚಾರ. ಇನ್ನೂ ಬಹಳ ಜನ ಪ್ರಶ್ನೆಗಳನ್ನು ಕೇಳುವವರಿದ್ದಾರೆ. ಉತ್ತರ ಸರಿಯಾಗಿ ಬಂದಿಲ್ಲ. ಇದನ್ನು ಇವತ್ತು ತಡೆಹಿಡಿದು, ಅರ್ಧ ಘಂಟೆ ಕಾಲ ಡಿಸ್‌ಕಷನ್‌ಗೆ ಇಟ್ಟುಕೊಳ್ಳಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಇದಕ್ಕೆ ಸಂಪೂರ್ಣವಾದ ಉತ್ತರ ನನ್ನ ಹತ್ತಿರವಿದೆ. ಉತ್ತರ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅರ್ಧ ಘಂಟೆ ಚರ್ಚೆಗೆ ಹಾಕಿಕೊಳ್ಳಿ.

ಅಧ್ಯಕ್ಷರು : ಮಾನ್ಯ ರಮೇಶ್ ಕುಮಾರ್‌ರವರು ಸಲಹೆ ಕೊಟ್ಟಿರುವ ರೀತಿಯಲ್ಲಿ ಇದು ಬಹಳ ಪ್ರಮುಖವಾದ ಪ್ರಶ್ನೆ. ಅನೇಕ ಸದಸ್ಯರು ಇದರ ಬಗ್ಗೆ ಪ್ರಶ್ನೆ ಕೇಳಲು ಕಾತುರರಾಗಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಾವು ಅಡ್ಜಸ್ಟ್ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಅದರ ಜೊತೆಗೆ ಬೇರೆ ಬೇರೆ ತೆಂಗಿನ ಬಗ್ಗೆ ಕ್ಯಾಟರ್‌ಪಿಲ್ಲರ್ ಬೇರೆ ಬೇರೆ ರೋಗಗಳು ಬರುತ್ತಿವೆ. ಅದರ ಬಗ್ಗೆ ಮಾನ್ಯ ಕೃಷ್ಣಮೂರ್ತಿಯವರು ಸಲಹೆ ಕೊಟ್ಟಿದ್ದಾರೆ. ಆದುದರಿಂದ, ಇದನ್ನು ತಡೆಹಿಡಿದು, ಹಾಫ್ ಆ್ಯನ್ ಹವರ್ ಡಿಸ್ಕಷನ್‌ಗೆ ಇಟ್ಟುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಇದು ಸಾಮಾನ್ಯ ಪ್ರಶ್ನೆಯಲ್ಲ. ಇಡೀ ರಾಜ್ಯದಲ್ಲಿ ಲಕ್ಷಾಂತರ ತೆಂಗಿನ ಗಿಡಗಳು ನಾಶವಾಗಿವೆ.

ಅಧ್ಯಕ್ಷರು : ಅದಕ್ಕೋಸ್ಕರವೇ ಹಾಫ್ ಆ್ಯನ್ ಹವರ್ ಡಿಸ್ಕಷನ್‌ನಲ್ಲಿ ತೆಗೆದುಕೊಳ್ಳೋಣ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರದ ಉತ್ತರ ಬೇಜವಾಬ್ದಾರಿಯಾಗಿದೆ. ಈ ಉತ್ತರ ಸರಿಯಿಲ್ಲ. ಈ ಉತ್ತರದಿಂದ ನಾವು ತೃಪ್ತರಾಗುವುದಕ್ಕೆ ಸಾಧ್ಯವಿಲ್ಲ. ಇದು ಪಕ್ಷಾತೀತವಾಗಿ, ಇಡೀ ಎರಡೂ ಕಡೆ ಇರುವ ಸದಸ್ಯರ ನೇರವಾದ ಪ್ರಶ್ನೆ. ಅದಕ್ಕೆ ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ, ಇದಕ್ಕೆ ನೇರವಾಗಿ, ಸಮಗ್ರವಾದ ಚರ್ಚೆಗೆ ಇವತ್ತೇ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಇದನ್ನು ತಡೆಹಿಡಿದಿದ್ದೇನೆ. ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡುತ್ತೇವೆ.

ಗೊಂದಲ

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ಈ ತರಹ ಮಾಡಿದರೆ ಹೇಗೆ? ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ. ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಈ ತರಹ ಮಾಡಿದರೆ ಹೇಗೆ?

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಗ್ರಾಮೀಣ ಸಂತೆಗಳು

19 (126) : ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಗ್ರಾಮೀಣ ಭಾಗಗಳಲ್ಲಿರುವ ಸಂತೆಗಳ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ವಿವರ ನೀಡುವುದು;

ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಎಷ್ಟು ಸಂತೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ ಹಾಗೂ ಉಳಿದವುಗಳನ್ನು ಯಾವಾಗ ಅಭಿವೃದ್ಧಿ ಪಡಿಸಲಾಗುವುದು;

ಇ) ಯಾವ ಯೋಜನೆಯಡಿಯಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ;

ಈ) ವಿಟ್ಲ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಗ್ರಾಮೀಣ ಸಂತೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ; ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?